ದಿನಾಂಕ 11.04.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ- ಶ್ರೀ ಸಿ ಎಲ್ ಎಸ್ ವಕೀಲರಿಂದಃ-

ನನ್ನ ತಂದೆಯು ದಾವಾ ಸ್ವತ್ತುಗಳಿಂದ ಬರುತ್ತಿದ್ದ ಆದಾಯದಲ್ಲಿ ಅರ್ಧ ಆದಾಯದ ಹಣವನ್ನು ವಾದಿಗೆ ನೀಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆಯು ಮೃತರಾದ ಬಳಿಕ, ದಾವೆಯನ್ನು ದಾಖಲಿಸುವವರೆಗೆ ವಾದಿಯು ದಾವಾ ಸ್ವತ್ತುಗಳಲ್ಲಿನ ಕಾಫಿ ಫಸಲಿನ ಪೈಕಿ ಅರ್ಧ ಫಸಲನ್ನು ಅವರೇ ತೆಗೆದುಕೊಂಡು ಹೋಗುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ದಾವೆಯನ್ನು ದಾಖಲಿಸಿದ ಬಳಿಕ ದಾವಾ ಸ್ವತ್ತುಗಳಲ್ಲಿದ್ದ ಬೆಳೆಗಳನ್ನು ಬಲವಂತವಾಗಿ ವಾದಿಗೆ ನೀಡದೆ ನಾವೇ ತೆಗೆದುಕೊಳ್ಳುತ್ತಿದ್ದೇವೆ ಎಂದರೆ ಸರಿಯಲ್ಲ. ವಾದಿಗೆ ಭಾಗಾಂಶವನ್ನು ನೀಡಿರುವುದರಿಂದ ದಾವಾ ಸ್ವತ್ತುಗಳಲ್ಲಿನ ಆದಾಯವನ್ನು ಮತ್ತು ಫಸಲನ್ನು ಅವರಿಗೆ ನೀಡುತ್ತಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದ ಪ್ಯಾರಾ 5 ರಲ್ಲಿ ನಮೂದಿಸಿರುವ ಅಪ್ಪಣ್ಣ ಎನ್ನುವವರು ಯಾರು ಎಂಬುವುದು ನನಗೆ ಗೊತ್ತಿಲ್ಲ. ನನ್ನ ಅಜ್ಜನನ್ನು ವೆಂಕಟಪ್ಪ ಮತ್ತು ಶಿವಯ್ಯ ಎಂಬ ಎರಡು ಹೆಸರುಗಳಿಂದ ಕರೆಯುತ್ತಾರೆ. ಅಪ್ಪಣ್ಣ ಮತ್ತು ವೆಂಕಟಪ್ಪರವರು ಒಂದೇ ತಂದೆಯ ಮಕ್ಕಳಾಗಿದ್ದು ತಾಯಂದಿರು ಬೇರೆ ಬೇರೆ ಎಂದರೆ ನನಗೆ ಗೊತ್ತಿಲ್ಲ. ಅಪ್ಪಣ್ಣ ಮತ್ತು ವೆಂಕಟಪ್ಪರವರ ನಡುವೆ ಕುಟುಂಬದ ಸ್ವತ್ತುಗಳು ವಿಭಾಗವಾಗಿದ್ದು, ಅಪ್ಪಣ್ಣನ ಹಿಸ್ಸೆಗೆ ಬಂದ ಸ್ವತ್ತುಗಳನ್ನು ಅವರ ಮಕ್ಕಳು ವಿಭಾಗ ಮಾಡಿಕೊಂಡು ಪ್ರತ್ಯೇಕವಾಗಿ ಅನುಭವಿಸುತ್ತಿದ್ದಾರೆ ಎಂದರೆ ಸರಿಯಲ್ಲ.

ನನ್ನ ಮುಖ್ಯ ವಿಚಾರಣೆಯ ಪ್ಯಾರಾ 5 ರಲ್ಲಿ ನಮೂದಿಸಿರುವ ವೆಂಕಟೇಶ್ ರವರು ತಮ್ಮ ಹಿಸ್ಸೆ ಗೆ ಬಂದ ಸ್ವತ್ತುಗಳ ಪೈಕಿ ಒಂದು ಜಮೀನನ್ನು ಮಾರಾಟ ಮಾಡಿದ್ದು, ಸದರಿ ಜಮೀನನ್ನು ಖರೀದಿಸಿದ ವ್ಯಕ್ತಿಯು ನಿವೇಶನಗಳನ್ನು ಮಾಡಿ

ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮಾರಾಟ ಮಾಡಿದ ಸ್ವತ್ತು ದಾವಾ ಸ್ವತ್ತುಗಳಿಗೆ ಹೊಂದಿಕೊಂಡಂತೆ ಇದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ಯಾರಾ 5 ರಲ್ಲಿ ನಮೂದಿಸಿರುವ ಚಂದ್ರಶೇಖರ್ ರವರು ತಮ್ಮ ಹಿಸ್ಸೆಗೆ ಬಂದ ಸ್ವತ್ತುಗಳಲ್ಲಿ ಸ್ವಾ ಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ಯಾರಾ 5 ರಲ್ಲಿ ನಮೂದಿಸಿರುವ ವಿ.ಟಿ. ರಾಣಿ, ಎ.ವಿ.ಚ್ರಂದ್ರಶೇಖರ್ ಮತ್ತು ಇತರರು ನನ್ನ ತಂದೆಯ ಸಂಬಂಧಿಕರು ಆಗಿರಬಹುದು. ವಿ.ಎಲ್. ಬಾಲಕೃಷ್ಣ, ವಿ.ಎಲ್. ಪುಟ್ಟರಾಜು, ವಿ.ಎಲ್.ಬಸವರಾಜು ಮತ್ತು ಪುಷ್ಪರಾಜುರವರುಗಳ ವಿರುದ್ಧ ಅವರ ಸಹೋದರಿ ಇದೇ ನ್ಯಾಯಾಲಯದಲ್ಲಿ ವಿಭಾಗ ಕೋರಿ ದಾವೆಯನ್ನು ಹೂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಅಜ್ಜನಿಗೆ ಸಹೋದರರು ಮತ್ತು ಸಹೋದರಿಯರು ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ದಾವಾಸ್ವತ್ತುಗಳು ನನ್ನ ಅಜ್ಜನಾದ ವೆಂಕಟಪ್ಪ ಅಲಿಯಾಸ್ ಶಿವಪ್ಪ ರವರಿಗೆ ಸೇರಿದ್ದು, ವಿ.ಟಿ. ರಾಣಿ, ಚಂದ್ರಶೇಖರ್, ಜಾನಕಿ, ಕುಸುಮ, ವಿ.ಎಲ್. ಬಾಲಕೃಷ್ಣ, ವಿ.ಎಲ್. ಪುಟ್ಟರಾಜು, ವಿ.ಎಲ್.ಬಸವರಾಜು ಮತ್ತು ಪುಷ್ಪರಾಜುರವರುಗಳಿಗೆ ದಾವಾ ಸ್ವತ್ತುಗಳ ಮೇಲೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನಿಡಿ-1 ಮತ್ತು 2 ರಲ್ಲಿ ನಮೂದಿಸಿರುವ ಸ್ವತ್ತುಗಳ ಮೇಲೆ ವಾದಿಗೆ ಭಾಗಾಂಶದ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ವಾದಿಗೆ ಭಾಗಾಂಶ ನೀಡುವುದನ್ನು ತಪ್ಪಿಸುವ ಉದ್ದೇಶದಿಂದ ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಿಂದ ವಾರ್ಷಿಕ ಒಂದೂವರೆ ಲಕ್ಷ ಆದಾಯ ಬರುತ್ತದೆ. ದಾವಾ ಸ್ವತ್ತುಗಳಿಂದ ವಾರ್ಷಿಕ 20 ರಿಂದ 25 ಲಕ್ಷ ರೂಪಾಯಿ ಆದಾಯ ಬರುತ್ತಿದ್ದರು ಸಹ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳ ಪೈಕಿ ಮೈಸೂರು ರಸ್ತೆಗೆ ಹೊಂದಿಕೊಂಡಿರುವ ಒಂದು ಆಸ್ತಿಯಲ್ಲಿ ಗುಜರಿ ಅಂಗಡಿ ನಡೆಸಲು ಬಾಡಿಗೆಗೆ ನೀಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಬಾಡಿಗೆ ಹಣವನ್ನು ಈಗಲೂ ಸಹ ನಾವು ಪಡೆದುಕೊಳ್ಳುತ್ತಿದ್ದೇವೆ ಎಂದರೆ ಸರಿಯಲ್ಲ. ಗುಜರಿ ಅಂಗಡಿ ಯ ಪಕ್ಕದಲ್ಲಿ ವಾದಿಯ ವಾಸದ ಮನೆ ಇದ್ದು, ವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಗುಜರಿ ಅಂಗಡಿ ಇಟ್ಟುಕೊಳ್ಳಲು ಬಾಡಿಗೆಗೆ ನೀಡಿರುತ್ತೇವೆ ಎಂದರೆ

ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ವಾದಿಗೆ ಭಾಗಾಂಶ ನೀಡಲು ನಾವು ಬದ್ಧರಾಗಿರುತ್ತೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ**- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇ**

(ಸಾಕ್ಷಿದಾರರ ಸಹಿ) ಸಹಿ:

ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.